# ಇದು ಫೇರ್ ಅಲ್ಲ...



**ಗೌರವರ್ಣದ ಘೋಷಣೆಗಳನ್ನು ಕೈಬಿಟ್ಟಿದ್ದೇವೆ ಎಂದು ಸೌಂದರ್ಯೋತ್ಪನ್ನಗಳ ಕಂಪನಿಗಳು ಹೇಳುತ್ತಿವೆ. ಆದರೆ, ಟ್ಯೂಬಿನ ಹೊರಮೈಯಷ್ಟೇ ಬದಲಾಗಿದೆ; ಅಂತರಂಗದ ಬದಲಾವಣೆ ಅಷ್ಟು ಸುಲಭವಲ್ಲ.**

■ ರಶ್ಮಿ ಕೆ.

ಅಮೆರಿಕದಲ್ಲಿ ಕಪ್ಪು ವರ್ಣೀಯರ ಮೇಲೆ ಪೊಲೀಸರ ದೌರ್ಜನ್ಯವನ್ನು ಖಂಡಿಸಿ ಜಗತ್ತಿನಾದ್ಯಂತ **#BlackLivesMatter** ಪ್ರತಿಭಟನೆ ಇತ್ತೀಚೆಗೆ ನಡೆಯಿತು. ಟ್ವಿಟರ್‌ನಲ್ಲಿ ಈ ಹ್ಯಾಶ್‌ಟ್ಯಾಗ್ ಟ್ರೆಂಡ್ ಆಗುತ್ತಿದ್ದಂತೆ ಬಾಲಿವುಡ್ ನಟಿಯರಾದ ಸೋನಂ ಕಪೂರ್, ಪ್ರಿಯಾಂಕಾ ಚೋಪ್ರಾ ಕೂಡಾ ಪ್ರತಿಭಟನೆಗೆ ಬೆಂಬಲ ಸೂಚಿಸಿ ಟ್ವೀಟ್ ಮಾಡಿದ್ದರು. ಕಪ್ಪು ವರ್ಣದ ಬಗ್ಗೆ ಇಷ್ಟೊಂದು ಕಾಳಜಿ ವಹಿಸುವವರು 'ಫೇರ್ ಆ್ಯಂಡ್ ಲವ್ಲಿ' ಕ್ರೀಮ್ ಜಾಹೀರಾತಿನಲ್ಲಿ ಯಾಕೆ ಕಾಣಿಸಿಕೊಂಡಿರಿ ಎಂದು ನೆಟಿಜನ್‌ಗಳು ಪ್ರಶ್ನೆ ಮಾಡಿದ್ದರು. ಬೆಳ್ಳಗಾಗಿಸುವ ಕ್ರೀಮ್‌ಗಳ ಜಾಹೀರಾತಿನ ವಿರುದ್ಧ ಪ್ರತಿಭಟನೆಯ ಕಾವು ಏರುತ್ತಿದ್ದಂತೆ 'ಜಾನ್ಸನ್ ಆ್ಯಂಡ್ ಜಾನ್ಸನ್' ಕಂಪನಿಯು 'ಕ್ಲೀನ್ ಆ್ಯಂಡ್ ಕ್ಲಿಯರ್ ಫೇರ್‌ನೆಸ್' ಉತ್ಪನ್ನಗಳನ್ನು ಭಾರತದಲ್ಲಿ ಮಾರಾಟ ಮಾಡುವುದಿಲ್ಲ ಎಂದು ಘೋಷಿಸಿತು. ಏಷ್ಯಾ ಮತ್ತು ಮಧ್ಯಪ್ರಾಚ್ಯದಲ್ಲಿ ತಮ್ಮ ಉತ್ಪನ್ನವಾದ 'ನ್ಯೂಟ್ರೋಜಿನಾ ಫೈನ್ ಫೇರ್‌ನೆಸ್' ಉತ್ಪನ್ನಗಳ ಮಾರಾಟವನ್ನೂ ಸಂಸ್ಥೆ ನಿಲ್ಲಿಸಿತ್ತು. ಭಾರತದಲ್ಲಿ ಫೇರ್‌ನೆಸ್ ಕ್ರೀಮ್‌ಗಳಿಗೆ ಬರವೇನೂ ಇಲ್ಲ. ಬೆಳ್ಳಗಿದ್ದರೆ ಮಾತ್ರ ಚಂದ ಎನ್ನುವ ಮನಸ್ಥಿತಿ ನಮ್ಮ ಸಮಾಜದಲ್ಲಿ ಇಂದಿಗೂ ಗಟ್ಟಿಯಾಗಿಯೇ ಬೇರೂರಿ ನಿಂತಿರುವಾಗ ಕಪ್ಪು ಚರ್ಮವನ್ನು ಬೆಳ್ಳಗಾಗಿಸುವ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಮೇಲುಗೈ ಸಾಧಿಸುವುದರ ಬಗ್ಗೆ ಅಚ್ಚರಿ ಪಡಬೇಕಿಲ್ಲ.

1975ರಲ್ಲಿ ಭಾರತದ ಮಾರುಕಟ್ಟೆಗೆ ಬಂದ ಹಿಂದೂಸ್ತಾನ್ ಯುನಿಲಿವರ್ ಲಿಮಿಟೆಡ್ ಉತ್ಪನ್ನ 'ಫೇರ್ ಆ್ಯಂಡ್ ಲವ್ಲಿ' ಕ್ರೀಮ್ ಜನರ ಮನಸ್ಥಿತಿಯನ್ನು ಚೆನ್ನಾಗಿಯೇ ಬಳಸಿಕೊಂಡಿತು. ಕಪ್ಪಗಿರುವ ಹುಡುಗಿಗೆ ಅದೆಷ್ಟೇ ಪ್ರತಿಭೆ ಇರಲಿ, ಅವಳು ವೇದಿಕೆಯ ಹಿಂದೆ ನಿಲ್ಲುತ್ತಾಳೆ; ಆಕೆ ಬೆಳ್ಳಗಾದರೆ ಮಾತ್ರ ವೇದಿಕೆಯಲ್ಲಿರಲು ಅವಕಾಶ. 30 ದಿನದಲ್ಲಿ ಬೆಳ್ಳಗಾಗಿ ಎಂದು ಹೇಳುತ್ತಾ ಫೇರ್ ಆ್ಯಂಡ್ ಲವ್ಲಿ ತನ್ನ ಮಾರುಕಟ್ಟೆಯನ್ನು ವಿಸ್ತರಿಸುತ್ತಾ ಹೋಯಿತು. ನೌಕರಿ ಸಿಗಬೇಕಾದರೆ, ಗಂಡಿನ ಕಡೆಯವರು ಹೆಣ್ಣನ್ನು ಒಪ್ಪಿಕೊಳ್ಳಬೇಕಾದರೆ ಆಕೆ ಬೆಳ್ಳಗಿರಲೇಬೇಕು ಎಂದು ಹೇಳುವ ಜಾಹೀರಾತುಗಳು ರಾರಾಜಿಸಿದವು. ಇವು ಕಪ್ಪು ಬಣ್ಣದವರಲ್ಲಿ ಕೀಳರಿಮೆಯನ್ನು ತೀವ್ರವಾಗಿಸುತ್ತಾ ಹೋದದ್ದು ಸುಳ್ಳಲ್ಲ.

15 ವರ್ಷಗಳ ಹಿಂದೆ ಅಂದರೆ 2005ರಲ್ಲಿ 'ಫೇರ್ ಆ್ಯಂಡ್ ಹ್ಯಾಂಡ್‌ಸಮ್' ಎಂಬ ಉತ್ಪನ್ನವನ್ನು 'ಇಮಾಮಿ' ಮಾರುಕಟ್ಟೆಗೆ ಪರಿಚಯಿಸಿತ್ತು. ಶಾರುಖ್ ಖಾನ್ ಅದರ ಜಾಹೀರಾತಿನಲ್ಲಿ ಕಾಣಿಸಿಕೊಂಡಿದ್ದರು. ಅಲ್ಲಿಯವರೆಗೆ 'ಫೇರ್‌ನೆಸ್ ಕ್ರೀಮ್' ಎಂಬುದು ಮಹಿಳೆಯರಿಗೆ ಮಾತ್ರ ಸೀಮಿತ ಎಂಬಂತೆ ಪ್ರಚಾರ ಮಾಡುತ್ತಿದ್ದ ಜಾಹೀರಾತುಗಳು ಗಂಡಿನ ಮೈ ಬಣ್ಣದ ಬಗ್ಗೆ ಕಾಳಜಿ ವಹಿಸತೊಡಗಿದವು. 2006ರಲ್ಲಿ ಹಿಂದೂಸ್ತಾನ್ ಯುನಿಲಿವರ್ 'ಫೇರ್ ಆ್ಯಂಡ್ ಲವ್ಲಿ ಫಾರ್ ಮೆನ್' ಉತ್ಪನ್ನವನ್ನು ಮಾರುಕಟ್ಟೆಗೆ ಪರಿಚಯಿಸುವ ಮೂಲಕ ಗಂಡಸರು ಕೂಡ ಬೆಳ್ಳಗಾಗಿ ಎಂದು ಕರೆಕೊಟ್ಟಿತು. ಅದರ ಬೆನ್ನಲ್ಲೇ ಗಂಡಸರ ಮೈ ಬಣ್ಣವನ್ನು ಮತ್ತಷ್ಟು ಬೆಳ್ಳಗಾಗಿಸಿ ಹ್ಯಾಂಡ್‌ಸಮ್ ಆಗಿಸುವ ಸಾಕಷ್ಟು ಉತ್ಪನ್ನಗಳು ಮಾರುಕಟ್ಟೆಗೆ ಬಂದವು. ಇದೀಗ ಹಿಂದೂಸ್ತಾನ್ ಯುನಿಲಿವರ್ ಲಿಮಿಟೆಡ್ 'ಫೇರ್ ಆ್ಯಂಡ್ ಲವ್ಲಿ' ಹೆಸರನ್ನು 'ಗ್ಲೋ ಆ್ಯಂಡ್ ಲವ್ಲಿ' ಎಂದು ಬದಲಿಸುವುದರ ಜತೆಗೆ 'ಫೇರ್ ಆ್ಯಂಡ್ ಲವ್ಲಿ ಫಾರ್ ಮೆನ್' ಹೆಸರನ್ನು 'ಗ್ಲೋ ಆ್ಯಂಡ್ ಹ್ಯಾಂಡ್‌ಸಮ್' ಎಂದು ಮಾಡಲು ನಿರ್ಧರಿಸಿದೆ. ಇತ್ತ ಇಮಾಮಿ ಈಗಾಗಲೇ ಈ ಹೆಸರನ್ನು ಬಳಸಿದ್ದು ಇದು 'ಬಿಜಿನೆಸ್ ವಾರ್' ಆಗಿ ಮಾರ್ಪಟ್ಟಿದೆ.

### ಹೆಸರು ಬದಲಾದರೆ ಸಾಕೇ?

'ಫೇರ್ ಆ್ಯಂಡ್ ಲವ್ಲಿ' ತನ್ನ ಕ್ರೀಮನ್ನು ರೀಬ್ರಾಂಡ್ ಮಾಡಿರುವುದು ಇದೇ ಮೊದಲೇನೂ